**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಿದ ದಿನಾಂಕ. 08-02-2021**

**ಮುಂದುವರಿದ ಪಾಟೀ ಸವಾಲು – 5ನೇ ಪ್ರತಿವಾದಿ ರವರ ಪರ ವಕೀಲರಾದ ಶ್ರೀ. ಹೆಚ್‌ಕೆಆರ್ ವಕೀಲರಿಂದ**

18) ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಯಾರು ತಯಾರಿಸಿದರು ಎಂದರೆ ನಾನೇ ತಯಾರಿಸಿದೆ. ನಾನು ಈ ದಾವೆಯ 5ನೇ ಪ್ರತಿವಾದಿಯನ್ನು ನೋಡಿದ್ದೀನಾ? ಎಂದರೆ ನೋಡಿಲ. ನನಗೆ ಈ ದಾವೆಯ 5ನೇ ಪ್ರತಿವಾದಿಯ ಬಗ್ಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ನ್ನು ನನ್ನ ತಾತ ನನಗೆ ಗೊತ್ತಿದ್ದಂತೆ 1947 ರಲ್ಲಿ ಖರೀದಿ ಮಾಡಿದ್ದರು. ದಾವಾ ಐಟಂ ನಂ.1 ನ್ನು 5ನೇ ಪ್ರತಿವಾದಿ ಪರವಾಗಿ ಕುಟುಂಬ ಖರ್ಚುಗಳ ನಿರ್ವಹಣೆ ಮಾಡಲು ನನ್ನ ತಂದೆ ಮತ್ತು ತಮ್ಮ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಕ್ರಯವಾಗುವಾಗಲೇ ಅದರ ಕ್ರಯದ ವಿಚಾರ ನನಗೆ ಗೊತ್ತಿತ್ತು ಎಂದರೆ ಗೊತ್ತಿರಲಿಲ್ಲ. ಹಾಗಾದರೆ ಸದರಿ ಐಟಂ ನಂ.1 ರ ಕ್ರಯದ ಬಗ್ಗೆ ನನಗೆ ಯಾವಾಗ ಗೊತ್ತಾಯಿತು? ಎಂದರೆ ಮಾರಾಟವಾದ 8 ದಿನಗಳ ನಂತರ ಗೊತ್ತಾಯಿತು. 4ನೇ ಪ್ರತಿವಾದಿ ವಿರುದ್ಧ ಸಲ್ಲಿಸಿದ ಕ್ರಿಮಿನಲ್ ಮೊಕದ್ದಮೆಯ ಸಂಖ್ಯೆ ಹೇಳಲಾಗುತ್ತದೆಯೇ ಎಂದರೆ ಮರೆತಿದ್ದೇನೆ. ಸದರಿ ಪ್ರಕರಣ ಇನ್ನೂ ವಿಚಾರಣೆಯಲ್ಲಿದೆಯೇ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಾನು ಆ ಪ್ರಕರಣದಲ್ಲಿ ಸುಮಾರು 8 ತಿಂಗಳ ಹಿಂದೆ ಹಾಜರಾಗಿದ್ದೆ. ಆನಂತರ ಕೊರೋನಾ ಬಂದಿದ್ದರಿಂದ ಹಾಜರಾಗಿಲ್ಲ.

19) ನನ್ನ ತಂದೆ ಅವರ ಜೀವಿತಾವಧಿಯಲ್ಲಿ ಹಲವಾರು ಆಸ್ತಿಗಳನ್ನು ಸಂಪಾದಿಸಿದ್ದರು ಎಂದರೆ ಇಲ್ಲ, ಎಲ್ಲವೂ ಪಿತ್ರಾರ್ಜಿತ ಆಸ್ತಿಗಳು. 5ನೇ ಪ್ರತಿವಾದಿ

ಖರೀದಿಸಿರುವ ಆಸ್ತಿಯ ಸರ್ವೆ ನಂಬರ್ ಹೇಳಬಲ್ಲೆ, ಅದು ಸರ್ವೆ ನಂ.26 ಇರುತ್ತದೆ. ಸದರಿ ಆಸ್ತಿಯನ್ನು ಕುಟುಂಬದ ಒಳಿತಿಗಾಗಿ ಮಾರಾಟ ಮಾಡಿದ್ದರೂ ಕೂಡ ನಾನು 5ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಕ್ರಯಪತ್ರವನ್ನು ಕುಟುಂಬದ ಒಳಿತಿಗಾಗಿ ಮಾಡಿರುವುದರಿಂದ ಆ ಕ್ರಯಪತ್ರವು ನನ್ನ ಮೇಲೆ ಕೂಡ ಬಂಧಕವಾಗುತ್ತದೆ ಎಂದರೆ ಸರಿಯಲ್ಲ. ಕ್ರಯದ ಮೊತ್ತವನ್ನು ನಾನೂ ಕೂಡ ಅನುಭವಿಸಿರುವ ಕಾರಣ ನನಗೆ ಈ ದಾವೆ ಹಾಕಲು ಯಾವುದೇ ಹಕ್ಕು ಇಲ್ಲವೆಂದರೆ ಸರಿಯಲ್ಲ. ನನ್ನ ತಂದೆ ನಾಲ್ಕು ವರ್ಷಗಳ ಹಿಂದೆ ಮೃತ ಪಟ್ಟರು. ನನ್ನ ತಂದೆ ಬದುಕಿದ್ದಾಗ ಅವರೇ ಕುಟುಂಬದ ಯಜಮಾನರಾಗಿದ್ದರು ಎಂದರೆ ಇಲ್ಲ, ನನ್ನ ತಂದೆ ಮನೆಯಲ್ಲಿ ಇರುತ್ತಿರಲಿಲ್ಲವಾದ್ದರಿಂದ ನಾನೇ ನೋಡಿಕೊಳ್ಳುತ್ತಿದ್ದೆ. ನನ್ನ ತಂದೆ ಬದುಕಿದ್ದಾಗ ನನಗೂ ಮತ್ತು ಅವರಿಗೂ ಸಂಬಂಧ ಚೆನ್ನಾಗಿಯೇ ಇತ್ತು ಎಂದರೆ ಚೆನ್ನಾಗಿರಲಿಲ್ಲ. ದಿ.28-12-1998 ರಂದು ಪಂಚಾಯಿತಿ ವಿಭಾಗ ಮಾಡಿಕೊಂಡ ಬಗ್ಗೆ ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸದರಿ ವಿಭಾಗವೇ ಆಗಿಲ್ಲ. ದಾವಾ ಐಟಂ ನಂ.1 ರ ಸ್ವಾಧೀನದಲ್ಲಿ ನಾನು ಇಲ್ಲವೆಂದರೆ ಸರಿಯಲ್ಲ. ನಾನು ಸ್ವಾಧೀನವಿರುವ ಬಗ್ಗೆ ಕಂದಾಯ ಕಟ್ಟಿದ್ದೀನಾ? ಎಂದರೆ ಕಟ್ಟಿದ್ದೇನೆ. ನಾನು ಕಂದಾಯವನ್ನು 2015 ರ ವರೆಗೆ ಕಟ್ಟಿದ್ದೇನೆ. ದಾವಾ ಐಟಂ ನಂ.1 ರ ಮಾರಾಟ ಮಾಡುವಾಗ ಖಾತೆ ನನ್ನ ತಂದೆಯ ಹೆಸರಿನಲ್ಲೇ ಇತ್ತು ಎಂದರೆ ಎಲ್ಲಾ ಆಸ್ತಿಗಳ ಖಾತೆಯೂ ಅವರ ಹೆಸರಲ್ಲೇ ಇತ್ತು. ಖಾತೆದಾರರಾಗಿ ಅವರೇ ಆಸ್ತಿ ನಿರ್ವಹಣೆ ಮತ್ತು ಕುಟುಂಬದ ನಿರ್ವಹಣೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರ ಕುರಿತಂತೆ ನಮ್ಮ ಕುಟುಂಬದ ನಡುವಿನ ವಿವಾದಕ್ಕೂ 5ನೇ ಪ್ರತಿವಾದಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಉಳಿದ ಕುಟುಂಬ ಸದಸ್ಯರ ಜೊತೆ ಸೇರಿ ಈಗಾಗಲೇ ಮಾರಾಟ ಮಾಡಿದ ಆಸ್ತಿಯ ಕುರಿತಂತೆ 5ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ತಂದಿದ್ದೇನೆ ಎಂದರೆ

ಸರಿಯಲ್ಲ. ನಾನು ಹಾಜರು ಮಾಡಿದ ಯಾವುದೇ ದಾಖಲೆಗಳ ಆಧಾರದ ಮೇಲೆ ಕೂಡ ದಾವಾ ಐಟಂ ನಂ.1 ರ ಮೇಲೆ ನನಗಿರುವ ಹಕ್ಕು ಅಧಿಕಾರವನ್ನು ರುಜುವಾತು ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿದ ನಿ.ಪಿ.3 ಪಹಣಿಯು 5ನೇ ಪ್ರತಿವಾದಿ ಆಸ್ತಿ ಖರೀದಿ ಮಾಡುವ ಸಮಯಕ್ಕಿಂತ ಮುಂಚಿನದು ಎಂದರೆ ಸರಿ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(**ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ.**

**ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**